ಸೃಜನಿ

ISSN: 2583-3510

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 36-42
Bi-Monthly, Peer-Reviewed, Open Access, Indexed Journal

SIRDF JOURNALS
editor@srujani.in
www.srujani.in

# ಏಕೀಕರಣೋತ್ತರ ಮಧ್ಯಕರ್ನಾಟಕದಲ್ಲಿ ಕಾರ್ಮಿಕರ ಪ್ರತಿಭಟನೆಗಳು: ಚಿತ್ರದುರ್ಗ ಜಿಲ್ಲೆಯಲ್ಲಿಕಾರ್ಮಿಕರ ಸಂಘಟನೆ ಮತ್ತು ನಾಯಕತ್ವ

**ಉಮೇಶ.ಆರ್.ಎಸ್*** **ಮತ್ತು ಡಾ. ಶಿವಪ್ಪ.ಆರ್****

*ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

***Abstract:***

*ಭಾರತದಲ್ಲಿ ಕಾರ್ಮಿಕರ ಒಕ್ಕೂಟಗಳು ರಚನೆಯಾಗಲು ಯೂರೋಪಿನಲ್ಲಾದ ಕಾರ್ಮಿಕರ ಸಂಘಟನೆಗಳ ರಚನೆ, ಹೋರಾಟಗಳೇ ಸ್ಫೂರ್ತಿಯಾಗಿದ್ದು ಬ್ರಿಟಿಷರ ಆಳ್ವಿಕೆಯಲ್ಲಿಯೇ ಭಾರತದಲ್ಲಿ ಪ್ರಥಮ ಕಾರ್ಮಿಕರ ಒಕ್ಕೂಟಗಳು ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಯ ಉದ್ದೇಶ ಹೊಂದಿದ್ದ ಕಾರ್ಮಿಕರ ಕಾಯ್ದೆಗಳು ರಚನೆಯಾದವು.ಪ್ರಸ್ತುತ ಲೇಖನದಲ್ಲಿ ಚಿತ್ರದುರ್ಗಜಿಲ್ಲೆಯಲ್ಲಿ ಕಾರ್ಮಿಕರನ್ನು ಸಂಘಟಿಸಿದ ಪ್ರಮುಖ ನಾಯಕರು ಮತ್ತು ಅವರ ನೇತೃತ್ವದಲ್ಲಿ ನಡೆದಂತಹ ಆಯ್ದ ಕೆಲವು ಕಾರ್ಮಿಕರ ಪ್ರತಿಭಟನೆಗಳು, ಸಂಘಟನೆಗಳು, ನಂತರದ ಬೆಳವಣಿಗೆಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.ಕಾರ್ಮಿಕರ ಒಕ್ಕೂಟಗಳು ಯಾವುದೇ ಸ್ತರಗಳಲ್ಲಿದ್ದರೂ ಅಂದರೆ ಅವು ರಾಷ್ಟ್ರೀಯ/ಕೇಂದ್ರಮಟ್ಟ, ರಾಜ್ಯಮಟ್ಟ ಅಥವಾ ಸ್ಥಳೀಯವಾಗಿ ರಚಿಸಿಕೊಂಡವುಗಳಾಗಿದ್ದರೂ ಕೂಡ ಅವುಗಳ ಉದ್ದೇಶಗಳು ಸಾಮಾನ್ಯವಾಗಿ ಒಂದೇ ರೂಪದಲ್ಲಿರುವುದನ್ನು ಗಮನಿಸಬಹುದಾಗಿದೆ.ಈ ಹಿನ್ನಲೆಯಲ್ಲಿ ಏಕೀಕರಣೋತ್ತರ ಮಧ್ಯಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಕಾರ್ಮಿಕರ ಸಂಘಟನೆ ಮತ್ತು ನಾಯಕತ್ವವನ್ನು ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.*

**Keywords:** *ಏಕೀಕರಣ, ಮಧ್ಯಕರ್ನಾಟಕ, ಕಾರ್ಮಿಕರು, ಹೋರಾಟಗಳು, ಚಿತ್ರದುರ್ಗ.*

## ಪೀಠಿಕೆ

ಕಾರ್ಮಿಕರ/ಕೂಲಿಕಾರರ ಸಂಘಗಳು ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಗಾಗಿ ಹುಟ್ಟಿಕೊಂಡು ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ತಳಹದಿಯ ಮೇಲೆ ನಿಂತಿವೆ. ಕಾರ್ಮಿಕರ ಹಿತ ಸಾಧನೆಗಾಗಿ, ರಕ್ಷಣೆಗಾಗಿ ಕಾರ್ಮಿಕರೆಲ್ಲರೂ ಒಂದಾಗಿ ಪ್ರಯತ್ನಿಸುವುದೇ ಕಾರ್ಮಿಕರ ಸಂಘಗಳ ಉದ್ದೇಶವಾಗಿದೆ.ಮತ್ತು ಮಾಲೀಕರ ದಬ್ಬಾಳಿಕೆ, ಶೋಷಣೆಗಳಿಂದ ಕಾರ್ಮಿಕರನ್ನು ದೂರವಿಟ್ಟು ಅವರಿಗೆ ಸಮಾಜದಲ್ಲಿ ಉತ್ತಮವಾದ ಸ್ಥಾನಮಾನ ಕಲ್ಪಿಸುವುದು ಬಹುಮುಖ್ಯವಾಗಿದೆ.

"ಉದ್ಯೋಗದಾತರ ಅಥವಾ ಕೈಗಾರಿಕಾ ಸ್ಥಾಪಕರ ನಿರಂಕುಶ ಪ್ರಭುತ್ವದ ವಿರುದ್ಧ ಸೆಣಸಿ ಕೈಗಾರಿಕಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮೂಲಕ ಕಾರ್ಮಿಕರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ ಕಾರ್ಮಿಕರಿಗೆ ಸಮಾಜದಲ್ಲಿ ಸ್ಥಾನಮಾನಗಳನ್ನು ದೊರಕಿಸಿಕೊಡುವಲ್ಲಿ ಕಾರ್ಮಿಕರ ಸಂಘಗಳ ಪಾತ್ರ ಮಹತ್ವದ್ದಾಗಿದೆ".ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಉತ್ಪಾದನಾ

***Please cite this article as:*** ಉಮೇಶ ಆರ್.ಎಸ್ ಮತ್ತು ಶಿವಪ್ಪ. ಆರ್. (2022) ಏಕೀಕರಣೋತ್ತರ ಮಧ್ಯಕರ್ನಾಟಕದಲ್ಲಿ ಕಾರ್ಮಿಕರ ಪ್ರತಿಭಟನೆಗಳು: ಚಿತ್ರದುರ್ಗ ಜಿಲ್ಲೆಯಲ್ಲಿ ಕಾರ್ಮಿಕರ ಸಂಘಟನೆ ಮತ್ತು ನಾಯಕತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 36–42.

ವಿಧಾನಗಳಲ್ಲಾದ ಬದಲಾವಣೆಗಳು ಮತ್ತು ಕಾರ್ಮಿಕರ ಮೇಲೆ ನಡೆದ ದೌರ್ಜನ್ಯಗಳನ್ನು ವಿರೋಧಿಸಿ ನಡೆದಂತಹ ಪ್ರತಿರೋಧದ ಅಭಿವ್ಯಕ್ತಿಯೇ ಕಾರ್ಮಿಕರ ಪ್ರತಿಭಟನೆಗಳು.

**ಏಕೀಕರಣೋತ್ತರ ಕರ್ನಾಟಕದಲ್ಲಿ ಕಾರ್ಮಿಕರ ಸಂಘಟನೆ ಮತ್ತು ಪ್ರತಿಭಟನೆಗಳು**

ಕರ್ನಾಟಕದಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಕಾರ್ಮಿಕರ ಮೇಲೆ ಮಾಲೀಕರು ನಡೆಸುತ್ತಿದ್ದ ದಬ್ಬಾಳಿಕೆ ಶೋಷಣೆಗಳು ನಿರಂತರವಾಗಿ ನಡೆಯುತ್ತಿದ್ದವು.ಏಕೀಕರಣದ ಪೂರ್ವದಲ್ಲಿ ಅನೇಕ ಕಾರ್ಮಿಕರ ಸಂಘಗಳು ರಚನೆಯಾಗಿ ತಮ್ಮ ಮೇಲಿನ ದೌರ್ಜನ್ಯವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು ಮತ್ತು ಅದರಲ್ಲಿ ಭಾಗಶಃ ಗೆಲುವಾಯಿತು.ಕಾರ್ಮಿಕರು ಅನುಭವಿಸುತ್ತಿದ್ದ ಸಮಸ್ಯೆಗಳು ಮತ್ತು ಅದರ ವಿರುದ್ಧ ಸಿಡಿದೆದ್ದು ಹೋರಾಟವನ್ನು ನಡೆಸುವುದು ಸಮಾಜದಲ್ಲಿ ಗಮನಾರ್ಹ ಬದಲಾವಣೆಗಳನ್ನು ತರಲು ಶ್ರೇಷ್ಠ ನಾಯಕರು, ಸಮಾಜವಾದಿ ಚಿಂತಕರುಗಳು ಕಾರ್ಮಿಕರನ್ನು ಸಂಘಟಿಸಿ ಹೋರಾಟವನ್ನು ನಡೆಸಲು ಎಐಟಿಯುಸಿ ಸಂಘಟನೆಯನ್ನು ಬೆಳೆಸಿದರು. ಏಕೀಕರಣದ ನಂತರ ಕರ್ನಾಟಕದಲ್ಲಿ ಕಾರ್ಮಿಕರ ಮೇಲಿನ ಶೋಷಣೆ ಮತ್ತು ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಎಐಟಿಯುಸಿಯು ಪ್ರಾಂತೀಯ ಮಟ್ಟದಲ್ಲಿ ಕಾರ್ಮಿಕರ ಸಂಘಟನೆಗಾಗಿ 1956 ಅಕ್ಟೋಬರ್ 27 ಮತ್ತು 28 ರಂದು ಕೋಲಾರದಲ್ಲಿ "ಮೈಸೂರು ಸಂಸ್ಥಾನ ಟ್ರೇಡ್ ಯೂನಿಯನ್ ಕೌನ್ಸಿಲ್" ಎಂಬ ಸಮ್ಮೇಳನ ನಡೆಸಿ ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಕೆ.ಪಿ.ಟಿ.ಯು.ಸಿ) ಎಂಬ ಕಾರ್ಮಿಕರ ಒಕ್ಕೂಟವನ್ನು ರಚಿಸಿತು. ಇದರ ನೇತೃತ್ವದಲ್ಲಿ ಕರ್ನಾಟಕದಾದ್ಯಂತ ಕಾರ್ಮಿಕರಿಗೆ ಸಂಬಂಧಿಸಿದಂತೆ ಉದ್ಭವಿಸುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಎಲ್ಲಾ ಕಾರ್ಮಿಕರಿಗೂ ಮಧ್ಯಮ ವರ್ಗದ ನೌಕರರಿಗೂ ಏಕರೀತಿಯ ಶಾಸನ, ವೇತನಗಳನ್ನು ಜಾರಿಗೆ ತರಲು ಕರೆನೀಡಿತು.

ಬೆಂಗಳೂರು, ಭದ್ರಾವತಿ, ಹರಿಹರ, ದಾವಣಗೆರೆ, ಕೋಲಾರ, ಬಳ್ಳಾರಿ ಮುಂತಾದ ಕಡೆ ಕಾರ್ಮಿಕರ ಮೇಲಿನ ದೌರ್ಜನ್ಯ, ಹೆಚ್ಚು ಕೆಲಸ ಕಡಿಮೆ ಕೂಲಿ, ಅಭದ್ರತೆ, ಸೌಕರ್ಯಗಳ ಕೊರತೆ ಇತ್ಯಾದಿ ಸಮಸ್ಯೆಗಳನ್ನು ಖಂಡಿಸಿ ಹಲವಾರು ಚಳವಳಿಗಳನ್ನು ಕಾರ್ಮಿಕರು ಏಕೀಕರಣೋತ್ತರ ಕಾಲದಲ್ಲಿ ಕೈಗೊಂಡಿರುವುದು ಕಂಡುಬರುತ್ತದೆ. ಏಕೀಕರಣೋತ್ತರದಲ್ಲಿ ಕಾಂ.ಸೂರ್ಯನಾರಾಯಣ (ಕಾಂ.ಸೂರಿ) ಎಂಬುವರು ಕರ್ನಾಟಕದಲ್ಲಿ ಕಾರ್ಮಿಕರ ಶೋಷಣೆ ಮತ್ತು ಸಮಸ್ಯೆಗಳ ವಿರುದ್ಧ ನಾಯಕತ್ವವನ್ನು ವಹಿಸಿಕೊಂಡು ಹೋರಾಟಗಳನ್ನು ನಡೆಸಿದ್ದು, ಕಾರ್ಮಿಕರ ಮನಸ್ಸಿನಲ್ಲಿ ತಮ್ಮದೇ ಆದ ಭದ್ರವಾದ ಸ್ಥಾನವನ್ನು ಪಡೆದಿದ್ದಾರೆ.ಸರ್ಕಾರ ನೀತಿ, ಆಧುನೀಕರಣದಿಂದಾಗಿ ಶೋಷಿತರಾದ ಕಾರ್ಮಿಕರು ಇವರ ನೇತೃತ್ವದಲ್ಲಿ ಸಂಘಟಿತರಾಗಿ ಬೆಂಗಳೂರು ಮತ್ತು ಸುತ್ತಮುತ್ತ ಅನೇಕ ಹೋರಾಟಗಳನ್ನು ನಡೆಸಿದರು.

ವಿವಿಧ ತತ್ವ ಸಿದ್ಧಾಂತಗಳ ಅಡಿಯಲ್ಲಿ ಕಾರ್ಮಿಕರನ್ನು ಸಂಘಟಿಸುವ, ಅವರ ಅಗತ್ಯತೆ, ಬೇಡಿಕೆಗಳನ್ನು ಈಡೇರಿಸುವಿಕೆ, ಅವರ ಮೇಲೆ ನಡೆಯುವ ದಬ್ಬಾಳಿಕೆ ಶೋಷಣೆಗಳನ್ನು ತಡೆಗಟ್ಟಿ ಉತ್ತಮ ಜೀವನ ಪರಿಸ್ಥಿತಿಯನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಹಲವಾರು ಕಾರ್ಮಿಕರ ಒಕ್ಕೂಟಗಳು ಸ್ವತಂತ್ರವಾಗಿ ಹಾಗೂ ರಾಜಕೀಯ ಪಕ್ಷಗಳ ಅಂಗಗಳಾಗಿ ಭಾರತದಾದ್ಯಂತ ಜನ್ಮ ತಾಳಿದವು. ಅಂತಹ ಕಾರ್ಮಿಕರ ಒಕ್ಕೂಟಗಳೆಂದರೆ ಎಐಟಿಯುಸಿ (1920), ಐಎನ್‌ಟಿಯುಸಿ (1947), ಹೆಚ್.ಎಂ.ಎಸ್(1948), ಬಿ.ಎಂ.ಎಸ್ (1954), ಯುಟಿಯುಸಿ (1949), ಸಿಐಟಿಯು (1970) ಮುಂತಾದವುಗಳು ಇವುಗಳ ಮೂಲಕ ಕಮ್ಯುನಿಷ್ಟರು, ಸೋಷಿಯಲಿಸ್ಟರು, ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಸಕ್ರಿಯವಾಗಿದ್ದು, ಕಾರ್ಮಿಕರನ್ನು ಸಂಘಟಿಸಲು ಮುಂದಾದರು. ಅವರ ಮೇಲೆ

ನಡೆಯುತ್ತಿದ್ದ ದಬ್ಬಾಳಿಕೆ, ಶೋಷಣೆಯ ವಿರುದ್ಧ ಬಂಡವಾಳ ಶಾಹಿಗಳು/ ಮಾಲೀಕರುಗಳ ವಿರುದ್ಧ ಪ್ರತಿಭಟನೆ, ಹೋರಾಟಗಳನ್ನು ಕೈಗೊಂಡು ಶ್ರಮಿಕರ ಅಗತ್ಯತೆ, ಬೇಡಿಕೆಗಳನ್ನು ಕಾರ್ಯಗತಗೊಳಿಸಿ, ಉತ್ತಮ ಜೀವನ ಸ್ಥಿತಿಯನ್ನು, ಪರಿಸರವನ್ನು ನಿರ್ಮಿಸಿಕೊಡುವಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಲೇ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಸುಧಾರಣೆಗಳನ್ನು ತರಲು ಬಯಸುತ್ತಾ ಆ ನಿಟ್ಟಿನಲ್ಲಿ ಕಾರ್ಮಿಕರಲ್ಲಿ ಜಾಗೃತಿಯನ್ನು ಮೂಡಿಸುತ್ತಾ, ಸಂಘಟನೆಯನ್ನು ಬಲಗೊಳಿಸುತ್ತಿರುವುದನ್ನು ಗುರುತಿಸಬಹುದಾಗಿದೆ.

**ಚಿತ್ರದುರ್ಗ ಜಿಲ್ಲೆಯಲ್ಲಿ ಆದಂತಹ ಕಾರ್ಮಿಕರ ಸಂಘಟನೆಗಳು ಮತ್ತು ನಾಯಕತ್ವ**

ಕಾರ್ಮಿಕರನ್ನು ಸಂಘಟಿಸುವ, ಅವರ ಅಗತ್ಯತೆಗಳನ್ನು ತೀರಿಸಲು ಪ್ರಯತ್ನಿಸುವ ಹಿನ್ನೆಲೆಯಲ್ಲಿ ಜನ್ಮ ತಾಳಿದ ಕಾರ್ಮಿಕರ ಒಕ್ಕೂಟಗಳು ಭಾರತದಾದ್ಯಂತ ಸ್ಥಾಪಿತಗೊಂಡು ಕರ್ನಾಟಕ ರಾಜ್ಯದಲ್ಲಿಯೂ ಪಾದಾರ್ಪಣೆ ಮಾಡಿದವು.ಅದರಂತೆಯೇ ಮಧ್ಯಕರ್ನಾಟಕದಲ್ಲಿಯೂ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿ ಸಮಾಜದಲ್ಲಿನ ಕಾರ್ಮಿಕರನ್ನು ಸಂಘಟಿಸುವ ಮತ್ತು ಆ ಮೂಲಕ ಶೋಷಿತರ ರಕ್ಷಣೆಗಾಗಿ ಬಂಡವಾಳ ಶಾಹಿಗಳ ದಬ್ಬಾಳಿಕೆ, ಶೋಷಣೆಯ ವಿರುದ್ಧ ಪ್ರತಿಭಟನೆಗಳು, ಮುಷ್ಕರಗಳನ್ನು ಕೈಗೊಂಡು ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಗೆ ಆದ್ಯತೆಯನ್ನು ನೀಡುತ್ತಿವೆ.

ಅವಿಭಜಿತ ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಹಲವು ಹತ್ತಿ ಗಿರಣಿ, ಎಣ್ಣೆ ಗಿರಣಿಗಳು ಅಸ್ತಿತ್ವಕ್ಕೆ ಬಂದಿದ್ದು, 1936 ರಲ್ಲಿ ದೊಡ್ಡ ಪ್ರಮಾಣದ ಅತ್ಯಾಧುನಿಕ ಯಂತ್ರಗಳ (ಆಗಿನ ಕಾಲಕ್ಕೆ) ಹತ್ತಿಗಿರಣಿಯು ದಾವಣಗೆರೆಯಲ್ಲಿ ಸ್ಥಾಪನೆಯಾಯಿತು.ಆರಂಭದಲ್ಲಿ ಅದು ನೂರಾರು ಕಾರ್ಮಿಕರಿಗೆ ಉದ್ಯೋಗ ಅವಕಾಶ ನೀಡಿತು.ಇದರೊಂದಿಗೆ ಅನೇಕ ಹತ್ತಿಗಿರಣಿಗಳು ತಮ್ಮ ಅಸ್ತಿತ್ವ ಕಂಡುಕೊಂಡವು.ಇವುಗಳು ಕಾರ್ಮಿಕರಿಗೆ ಅಗತ್ಯ ಸೌಲಭ್ಯಗಳನ್ನು ನೀಡುವಲ್ಲಿ ಅವರು ಮುಂದಾಗಲಿಲ್ಲ, ಕಾರ್ಮಿಕರ ಮೇಲಿನ ಶೋಷಣೆ ತೀವ್ರವಾಗಿದ್ದು, ಕಾರ್ಲ್‌ಮಾರ್ಕ್ಸ್‌ರವರ 'ಶ್ರಮಕ್ಕೆ ತಕ್ಕ ಫಲ' 'ಶೋಷಣೆಯ ವಿರುದ್ಧದ ಹೋರಾಟ' ತತ್ವಗಳು ಕಾರ್ಮಿಕರನ್ನು ಸೆಳೆದವು.ದಾವಣಗೆರೆಯಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಾರ್ಮಿಕರು ಸಂಘಟಿತರಾದರು. ಸಿಪಿಐ ನಾಯಕರಾದ ಶ್ರೀ ಬಿ.ವಿ.ಕಕ್ಕಿಲಾಯ, ಶ್ರೀ ಎನ್.ಡಿ.ಶಂಕರ್, ಶ್ರೀ ಪಂಪಾಪತಿ, ಶ್ರೀ ಹೆಚ್.ಕೆ.ರಾಮಚಂದ್ರಪ್ಪ, ಶ್ರೀ ಸುರೇಶ್, ಶ್ರೀ ಶೇಖರಪ್ಪ ಮುಂತಾದ ನಾಯಕರು ಕಾರ್ಮಿಕರನ್ನು ಸಂಘಟಿಸಲು ಮುಂದಾದರು ಹಾಗೂ ಕಮ್ಯುನಿಸ್ಟ್ ಪಕ್ಷದ ಅಡಿಯಲ್ಲಿ ಸ್ಥಾಪಿತವಾದ ಎಐಟಿಯುಸಿ ಸಂಘಟನೆಯು ಬಲವಾಗಿ ಕಾರ್ಮಿಕರಲ್ಲಿ ಶೋಷಣೆಯ ವಿರುದ್ಧ ಹೋರಾಡಲು ಸಂಘಟಿತರಾದರು.ಇದು ಕ್ರಮೇಣ ಚಿತ್ರದುರ್ಗದಲ್ಲಿಯೂ ಪ್ರಬಲವಾಯಿತು. 1970 ರಲ್ಲಿ ಕಮ್ಯುನಿಸ್ಟ್ ಪಕ್ಷವು ವಿಭಜನೆಯಾದಾಗ ಸಿಪಿಐ ನೇತೃತ್ವದಲ್ಲಿ ಎಐಟಿಯುಸಿ, ಸಿಪಿಐ(ಎಂ) ನೇತೃತ್ವದಲ್ಲಿ ಸಿಐಟಿಯು ಗಳು ರಚನೆಯಾಗಿ ಕಾರ್ಮಿಕರಲ್ಲಿನ ಒಗ್ಗಟ್ಟು ನಾಶವಾಗಿ ಬೇರೆ ಬೇರೆ ಗುಂಪುಗಳಲ್ಲಿ ಚದುರಿದರು. ಈ ಸಂದರ್ಭದಲ್ಲಿ ಕಾರ್ಮಿಕರಲ್ಲಿ ಸಂಘಟನೆ ಮೂಡಿಸುವಂತಹ ಹಲವು ಒಕ್ಕೂಟಗಳು (ಬಿ.ಎಂ.ಎಸ್ ಮತ್ತು ಹೆಚ್.ಎಂ.ಎಸ್) ಸ್ಥಾಪಿತವಾಗಿದ್ದು ಕಾರ್ಮಿಕರಲ್ಲಿಯೇ ಭಿನ್ನಾಭಿಪ್ರಾಯ ದ್ವೇಷ ಅಸೂಯೆಗಳು ಹುಟ್ಟಿದವು.ಗಲಭೆಗಳು ಸಾವು ನೋವುಗಳು ಸಂಭವಿಸಿ ದಾವಣಗೆರೆಯಲ್ಲಿ ಹಲವು ನಾಯಕರು ಸಾವಿಗೀಡಾದರು.(ಶೇಖರಪ್ಪ, ಸುರೇಶ್, ರೇವಣಸಿದ್ದಪ್ಪ ಮುಂತಾದವರ ಕೊಲೆಗಳು) ಇದು ಕಾರ್ಮಿಕರಲ್ಲಿ ಸಿಪಿಐ ಬಗ್ಗೆ ಜಾಗೃತಿ ಭಾವನೆ ಮೂಡಿಸಿ ಸಂಘಟಿತರಾಗಲು ಅವಕಾಶ ನೀಡಿತು.ಇದರಿಂದಾಗಿ ಸಿ.ಪಿ.ಐ. ಮುಖಂಡರಾದ ಶ್ರೀ ಪಂಪಾಪತಿಯವರು ಪ್ರಬಲ ನಾಯಕರಾಗಿ ಏಳಿಗೆ ಹೊಂದಿದರು.ಸಿ.ಪಿ.ಐ ನೆರಳಿನಲ್ಲಿ ಎಐಟಿಯುಸಿಯು

ಬಲಿಷ್ಠವಾಯಿತು.ಹೀಗೆ ದಾವಣಗೆರೆಯಲ್ಲಿ ಕಮ್ಯುನಿಸ್ಟ್ ಪಕ್ಷವು ಪ್ರಬಲವಾಗಿ ಅದರ ಮೂಲಕ ಕಾರ್ಮಿಕರ ಸಂಘಟನೆಯು ತೀವ್ರವಾಯಿತು.ಅದರಂತೆಯೆ ಚಿತ್ರದುರ್ಗದಲ್ಲಿಯು 1970–80ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಮತ್ತು ಅದರ ಅಂಗವಾದ ಎಐಟಿಯುಸಿಯು ಪ್ರಬಲವಾಗುತ್ತಾ ವಿವಿಧ ಕ್ಷೇತ್ರಗಳ ಕಾರ್ಮಿಕರನ್ನು ಸಂಘಟಿಸುವಲ್ಲಿ ನಿರತವಾಯಿತು. ಈ ಕಾರ್ಯದಲ್ಲಿ ದಾವಣಗೆರೆಯ ಶ್ರೀ ಪಂಪಾಪತಿ, ಶ್ರೀ ಹೆಚ್.ಕೆ.ರಾಮಚಂದ್ರಪ್ಪ, ಬೆಂಗಳೂರಿನ ಶ್ರೀ ಎಂ.ಎಸ್.ಕೃಷ್ಣನ್, ಶ್ರೀ ಆನಂದತೀರ್ಥ.ವಿ.ಆರ್, ಚಿಕ್ಕಮಗಳೂರಿನ ಶ್ರೀ ಸುಂದರೇಶ್ ಮುಂತಾದವರ ಸಲಹೆ, ಮಾರ್ಗದರ್ಶನದಲ್ಲಿ ಕಮ್ಯುನಿಸ್ಟ್ ನಾಯಕರಾದ ಶ್ರೀ ಜಿ.ಚಂದ್ರಪ್ಪ, ಶ್ರೀ ವೈ.ಹನುಮಂತಪ್ಪ ಎಂಬ ಕಾರ್ಮಿಕ ನಾಯಕರು ಚಿತ್ರದುರ್ಗ ಜಿಲ್ಲೆಯಲ್ಲಿ (ದಾವಣಗೆರೆ ತಾಲ್ಲೂಕು ಹೊರತುಪಡಿಸಿ) ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾದರು.

ಏಕೀಕರಣೋತ್ತರ ಚಿತ್ರದುರ್ಗ ಜಿಲ್ಲೆಯಲ್ಲಿ 1970ರ ನಂತರ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಅಂಗವಾದ ಎಐಟಿಯುಸಿ ಕಾರ್ಮಿಕರ ಒಕ್ಕೂಟವು ಸ್ಥಾಪಿತವಾಯಿತು. ದಾವಣಗೆರೆಯ ಕಮ್ಯುನಿಸ್ಟ್ ನಾಯಕರಾದ ಶ್ರೀ ಪಂಪಾಪತಿಯವರ ಪ್ರೇರಣೆಯಿಂದಾಗಿ ಅವರ ಬೆಂಬಲಿಗರಾದ ಶ್ರೀ ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್ ಮತ್ತು ಸ್ಪಿನ್ನಿಂಗ್ ಮಿಲ್‌ನ ಕಾರ್ಮಿಕರಾಗಿದ್ದ ಶ್ರೀ ಜಿ.ಚಂದ್ರಪ್ಪ, ಆರ್.ಹೆಚ್. ಕಾಟನ್ ಜಿನ್ನಿಂಗ್ ಮಿಲ್‌ನ ಕಾರ್ಮಿಕರಾದ ಶ್ರೀ ವೈ.ಹನುಮಂತಪ್ಪ, ಶ್ರೀ ಪಾಪಿ ತಿಪ್ಪೇಸ್ವಾಮಿ, ಶ್ರೀ ನಂಜುಂಡಪ್ಪ ಮುಂತಾದವರು ಕಾರ್ಮಿಕರನ್ನು ಸಂಘಟಿಸಲು ಮುಂದಾದರು. ಏಕೀಕರಣೋತ್ತರ ಕಾಲದಲ್ಲಿ ಚಿತ್ರದುರ್ಗದಲ್ಲಿ ಹತ್ತಿಗಿರಣಿಗಳು, ಎಣ್ಣೆ ಗಿರಣಿಗಳು, ಅಕ್ಕಿ ಗಿರಣಿಗಳು, ಚಳ್ಳಕೆರೆಯಲ್ಲಿ ಎಣ್ಣೆ ಗಿರಣಿಗಳು, ಅಕ್ಕಿ ಗಿರಣಿಗಳು, ಹಿರಿಯೂರಿನಲ್ಲಿ ಹತ್ತಿ ಗಿರಣಿಗಳು, ಎಣ್ಣೆ ಗಿರಣಿಗಳು, ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಗಳು ಇತ್ಯಾದಿ ಸ್ಥಾಪಿತವಾಗಿದ್ದು, ಸಾವಿರಾರು ಕಾರ್ಮಿಕರು ಜಿಲ್ಲೆಯಾದ್ಯಂತ ಕೆಲಸ ಮಾಡುತ್ತಿದ್ದರು. (ಪ್ರಸ್ತುತ ಬಹುತೇಕ ಗಿರಣಿ, ಕಾರ್ಖಾನೆಗಳು ಸ್ಥಗಿತವಾಗಿವೆ) ಇವರ ಶ್ರಮದ ಫಲವಾಗಿ ಮಾಲೀಕರು ಶ್ರೀಮಂತರಾಗಿದ್ದು, ದಬ್ಬಾಳಿಕೆಯ ಪ್ರವೃತ್ತಿಯನ್ನು ನಡೆಸುತ್ತಿದ್ದರು.ಕಾರ್ಮಿಕರುಗಳು ತಮ್ಮ ಮೇಲೆ ನಡೆಸುತ್ತಿದ್ದ ಶೋಷಣೆಗಳನ್ನು ಪ್ರಶ್ನಿಸದೇ, ವಿರೋಧಿಸದೆ ನಿರಂತರವಾಗಿ ಕೆಲಸ ಮಾಡುತ್ತಿದ್ದರು.ಕಾರ್ಮಿಕರಲ್ಲಿ ಯಾವುದೇ ಸಂಘಟನೆಗಳಿಲ್ಲದೇ ಸೂಕ್ತ ನಾಯಕತ್ವ ಇಲ್ಲದೇ ಶೋಷಣೆಗೆ ಗುರಿಯಾಗುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ದಾವಣಗೆರೆಯ ಕಾರ್ಮಿಕ ನಾಯಕರು ಸಿಪಿಐ ಮುಖಂಡರಾದ ಶ್ರೀ ಪಂಪಾಪತಿಯವರ ಮಾರ್ಗದರ್ಶನ ಪ್ರೇರಣೆಯಿಂದಾಗಿ ಕಾರ್ಮಿಕ ನಾಯಕರಾದ ಶ್ರೀ ಜಿ.ಚಂದ್ರಪ್ಪ ಎನ್ನುವವರು ತಾವು ಕೆಲಸ ಮಾಡುತ್ತಿದ್ದ "ಶ್ರೀ ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್ ಮತ್ತು ಸ್ಪಿನ್ನಿಂಗ್ ಮಿಲ್'ನಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 600 ಜನ ಕಾರ್ಮಿಕರನ್ನು ಮೊದಲ ಬಾರಿಗೆ ಸಂಘಟಿಸಿಕೊಂಡು ಚಿತ್ರದುರ್ಗದಲ್ಲಿ 1975ರಲ್ಲಿ 'ಶ್ರೀ ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್ ಮತ್ತು ಸ್ಪಿನ್ನಿಂಗ್ ಮಿಲ್ ಕಾರ್ಮಿಕರ ಸಂಘ'ವನ್ನು ಸ್ಥಾಪಿಸಿದರು. ಅದರ ಮುಖಾಂತರ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರತಿಭಟನೆಗಳನ್ನು ಕೈಗೊಂಡರು. ಅದರಿಂದ ಪ್ರೇರಣೆಗೊಂಡ ಆರ್.ಹೆಚ್.ಕಾಟನ್ ಕಾಟನ್ ಜಿನ್ನಿಂಗ್ ಮಿಲ್, ಜಿ.ಹೆಚ್.ಆರ್.ಕಾಟನ್ ಸ್ಪಿನ್ನಿಂಗ್ ಮಿಲ್, ವಿಜಯಲಕ್ಷ್ಮಿ ಕಾಟನ್ ಮಿಲ್, ಶ್ರೀನಿವಾಸ ಮಿಲ್‌ಗಳು, ಚಳ್ಳಕೆರೆಯಲ್ಲಿನ ಎಣ್ಣೆ ಗಿರಣಿಗಳಲ್ಲಿ, ಹಿರಿಯೂರಿನ ಸಕ್ಕರೆ ಕಾರ್ಖಾನೆ, ಹೊಸದುರ್ಗದ ಸಿಮೆಂಟ್ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಂಘಟಿತರಾಗತೊಡಗಿದರು. ಈ ಎಲ್ಲಾ ಕಾರ್ಖಾನೆ ಉದ್ದಿಮೆಗಳಲ್ಲಿನ ಕಾರ್ಮಿಕರ ಸಂಘಟನೆ, ಪ್ರತಿಭಟನೆಗಳಿಗೆ ಕಮ್ಯುನಿಸ್ಟ್ ನಾಯಕರು ಮತ್ತು ಎಐಟಿಯುಸಿಯ ಮುಖಂಡರಾದ ಕಾಂ.ಜಿ.ಚಂದ್ರಪ್ಪ ಮತ್ತು ಕಾಂ.ವೈ.ಹನುಮಂತಪ್ಪನವರ ನೇತೃತ್ವವನ್ನು

ಗುರುತಿಸಬಹುದು. ಅದರಲ್ಲಿ ಶ್ರೀ ಜಿ.ಚಂದ್ರಪ್ಪನವರ ಪಾತ್ರವನ್ನು ಬಹುತೇಕ ಎಲ್ಲಾ ಕಾರ್ಮಿಕರ ಚಳವಳಿ, ಹೋರಾಟಗಳಲ್ಲಿ ಗುರುತಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾರ್ಮಿಕರು ಸಂಘಟಿತರಾಗಿ ಕಡಿಮೆ ಕೂಲಿಗೆ ಹೆಚ್ಚು ದುಡಿಸಿಕೊಳ್ಳುವುದು, ಬೋನಸ್‌ಗಾಗಿ, ಕೆಲಸ ಮಾಡುವ ಸ್ಥಳದಲ್ಲಿ ಆಗುವ ಅಪಮಾನಗಳ ವಿರುದ್ಧ, ಉತ್ತಮ ವಾತಾವರಣಕ್ಕಾಗಿ, ನಿಗದಿತ ಸಮಯಕ್ಕೆ ಸರಿಯಾಗಿ ವೇತನವನ್ನು ನೀಡುವಂತೆ, ರಾತ್ರಿಪಾಳಿ ಕೆಲಸಗಾರರಿಗೆ ಸೂಕ್ತ ಭದ್ರತೆ ಮತ್ತು ಅಗತ್ಯ ಸೌಕರ್ಯಗಳನ್ನು ಕಲ್ಪಿಸುವಂತೆ ಬೇಡಿಕೆ ಇಟ್ಟು, ತಮಗಾಗುತ್ತಿದ್ದ ಅನ್ಯಾಯ ಶೋಷಣೆಯನ್ನು ವಿರೋಧಿಸಿ ಉತ್ತಮ ಜೀವನದ ಸ್ಥಿತಿಗತಿಗಳನ್ನು ಪಡೆದುಕೊಳ್ಳಲು ಹೋರಾಟಗಳನ್ನು / ಪ್ರತಿಭಟನೆಗಳನ್ನು ನಡೆಸಲು ಮುಂದಾದರು. ಈ ಮೊದಲು ಕಾರ್ಮಿಕರಲ್ಲಿ ಸಂಘಟನೆಗಳು, ಸೂಕ್ತ ನಾಯಕತ್ವ ಇಲ್ಲದ್ದರಿಂದಾಗಿ ತಮ್ಮ ಸಮಸ್ಯೆಗಳನ್ನು ವಿರೋಧಿಸದೇ ಅವುಗಳನ್ನು ಅನುಭವಿಸುತ್ತಿದ್ದರು. ಇಂತಹ ಸನ್ನಿವೇಶದಲ್ಲಿ 1970–80 ರ ದಶಕದಲ್ಲಿ ಶ್ರೀ ಜಿ.ಚಂದ್ರಪ್ಪ, ಶ್ರೀ ವೈ.ಹನುಮಂತಪ್ಪ, ಶ್ರೀ ಸಿ.ವೈ.ಶಿವರುದ್ರಪ್ಪ ಮುಂತಾದ ಸ್ಥಳೀಯ ಸಿಪಿಐ/ಎಐಟಿಯುಸಿ ಮುಖಂಡರು ಮತ್ತು ಅವರಿಗೆ ಮಾರ್ಗದರ್ಶಕರಾಗಿದ್ದ ಶ್ರೀ ಪಂಪಾಪತಿ, ಶ್ರೀ ಹೆಚ್.ಕೆ. ರಾಮಚಂದ್ರಪ್ಪ, ಶ್ರೀ ಆನಂದ ತೀರ್ಥ.ವಿ.ಆರ್ ಇವರುಗಳ ನಾಯಕತ್ವದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಸಿಪಿಐ ಮತ್ತು ಎಐಟಿಯುಸಿಗಳು ಪ್ರಬಲಗೊಂಡು ವಿವಿಧ ವಲಯದ ಕಾರ್ಮಿಕರನ್ನು ಸಂಘಟಿಸಿ ತಮ್ಮ ಮೇಲೆ ನಡೆಯುತ್ತಿದ್ದಂತಹ ದಬ್ಬಾಳಿಕೆ, ಶೋಷಣೆಗಳನ್ನು ಖಂಡಿಸಿ ಅದರ ವಿರುದ್ಧ ಧ್ವನಿಯನ್ನು ಎತ್ತಲು ಧೈರ್ಯ, ಆತ್ಮವಿಶ್ವಾಸವನ್ನು ತುಂಬಿದರು.

ಇದರಿಂದ ಜಾಗೃತರಾದ ಕಾರ್ಖಾನೆಯ ಮಾಲೀಕರು ಮತ್ತು ಕಾರ್ಮಿಕ ಮುಖಂಡರುಗಳು ಸೇರಿ ಕಾರ್ಮಿಕರ ಹಿತದೃಷ್ಟಿಯಿಂದ "ಶ್ರೀ ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್ ನೌಕರರ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘ"ವನ್ನು 1982ರಲ್ಲಿ ಸ್ಥಾಪಿಸಿದರು.ಆ ಮೂಲಕ ಕಾರ್ಮಿಕರಿಗೆ ಕಡಿಮೆ ವೆಚ್ಚದಲ್ಲಿ ದಿನಬಳಕೆಯ ವಸ್ತುಗಳನ್ನು ನೀಡುವ ವ್ಯವಸ್ಥೆ ಮಾಡಲಾಯಿತು. ಶ್ರೀ ವೈ.ಹನುಮಂತಪ್ಪನವರ ನೇತೃತ್ವದಲ್ಲಿ ಆರ್.ಹೆಚ್.ಜಿನ್ನಿಂಗ್ ಮಿಲ್, ಜಿ.ಹೆಚ್.ಆರ್.ಜಿನ್ನಿಂಗ್ ಮಿಲ್, ವಿಜಯಲಕ್ಷ್ಮಿ ಕಾಟನ್ ಮಿಲ್‌ನ ಕಾರ್ಮಿಕರನ್ನು ಸಂಘಟಿಸಲಾಯಿತು. ಆ ಮೂಲಕ ಕಾರ್ಮಿಕರ ಮೇಲೆ ನಡೆಯುತ್ತಿದ್ದ ಕೆಲಸದ ಒತ್ತಡ, ದಬ್ಬಾಳಿಕೆಯ ವಿರುದ್ಧ, ವೇತನ ಹೆಚ್ಚಳಕ್ಕಾಗಿ, ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವುದರ ವಿರುದ್ಧ ಹೋರಾಟಗಳನ್ನು ಸಂಘಟಿಸಿದರು.ಈ ಹೋರಾಟಗಳಲ್ಲಿ ಕಾರ್ಮಿಕರು ಬಹುತೇಕವಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡರು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನಲ್ಲಿ ಕ್ರಿ.ಶ. 1980ರ ದಶಕದಲ್ಲಿ ಸುಮಾರು 100ಕ್ಕೂ ಹೆಚ್ಚು ಎಣ್ಣೆ ಗಿರಣಿಗಳು ಕಾರ್ಯನಿರ್ವಹಿಸುತ್ತಿದ್ದು, ಸುಮಾರು 20000ಕ್ಕೂ ಹೆಚ್ಚು ಜನರು ದಿನನಿತ್ಯ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದರು.ಎಣ್ಣೆ ಉತ್ಪಾದನೆಯಲ್ಲಿ ಕರ್ನಾಟಕದಲ್ಲಿಯೇ ಪ್ರಮುಖ ನಗರವಾಗಿತ್ತು.ಇಲ್ಲಿನ ಎಣ್ಣೆ ಗಿರಣಿಗಳಲ್ಲಿ ಸ್ತ್ರೀ–ಪುರುಷರಿಬ್ಬರೂ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ಕಡಿಮೆ ಕೂಲಿ / ವೇತನವನ್ನು ಪಡೆಯುತ್ತಿದ್ದರು. ಹಗಲಿರುಳು ದುಡಿಯುತ್ತಿದ್ದ ಕಾರ್ಮಿಕರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳಿಂದ ಇಎಸ್ಐ, ಪಿಎಫ್, ಕನಿಷ್ಟ ವೇತನಗಳ ಸೌಲಭ್ಯವು, ಸಾಮಾಜಿಕ ಭದ್ರತೆಗಳು, ಕಾರ್ಯಸ್ಥಳದಲ್ಲಿ ರಕ್ಷಣಾತ್ಮಕ ಕ್ರಮಗಳಾಗಲಿ ಇರಲಿಲ್ಲ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಎಣ್ಣೆಮಿಲ್ಲು ಕಾರ್ಮಿಕರು ದುಡಿಯುತ್ತಿದ್ದರು, ಅಲ್ಲದೇ ಕಾರ್ಮಿಕರು ಕೆಲಸದ ವೇಳೆ ಗಾಯಗೊಂಡರೆ ಅವರಿಗೆ ಸೂಕ್ತ ವೈದ್ಯಕೀಯ ಸೌಲಭ್ಯ ಪರಿಹಾರಗಳನ್ನು ನೀಡುತ್ತಿರಲಿಲ್ಲ. ಕಾರ್ಮಿಕರು ಕಡಿಮೆ ವೇತನಕ್ಕಾಗಿ 8 ರಿಂದ 10 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಇಂತಹ ಕಾರ್ಮಿಕರ

ದುಃಸ್ಥಿತಿಯನ್ನು ಗುರುತಿಸಿದ ಸಿಪಿಐ/ಎಐಟಿಯುಸಿ ಯ ಘಟಕದ ನಾಯಕರಾದ ಶ್ರೀ ಪಂಪಾಪತಿ, ಶ್ರೀ ಹೆಚ್.ಕೆ.ರಾಮಚಂದ್ರಪ್ಪ, ಶ್ರೀ ಜಿ.ಚಂದ್ರಪ್ಪ, ಶ್ರೀ ಸಿ.ವೈ. ಶಿವರುದ್ರಪ್ಪ, ಪಾಲಯ್ಯ, ಸೈಯದ್, ಹಾಯ್ಕಲ್ ನಾಗರಾಜ್, ಪಿ.ತಿಪ್ಪೇರುದ್ರಪ್ಪ, ದೊಡ್ಡ ಉಳ್ಳಾರ್ತಿ ಕರಿಯಣ್ಣ ಮುಂತಾದ ನಾಯಕರು ಕಾರ್ಮಿಕರನ್ನು ಸಂಘಟಿಸುತ್ತಾ ಅವರ ಸಮಸ್ಯೆಗಳನ್ನು ಪರಿಷ್ಕರಿಸಲು ಪ್ರತಿಭಟನೆಗಳನ್ನು ಹಮ್ಮಿಕೊಂಡರು. ವಿವಿಧ ಕಾರ್ಮಿಕರ ನಾಯಕರ ನೇತೃತ್ವದಲ್ಲಿ ಹಲವಾರು ಬಾರಿ ಪ್ರತಿಭಟನೆಗಳನ್ನು ನಡೆಸಿದಾಗ ಕಾರ್ಖಾನೆಗಳ ಮಾಲೀಕರು ಕಾರ್ಮಿಕರ ಸಂಘಟನೆಗಳಲ್ಲಿನ ಒಗ್ಗಟ್ಟಿಗೆ ಮಣಿದು ಅವರ ಬೇಡಿಕೆಗಳನ್ನು ಈಡೇರಿಸಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದಿರುವ ಕಾರ್ಮಿಕರ ಸಂಘಟನೆ ಮತ್ತು ಹೋರಾಟಗಳಲ್ಲಿ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಹೋರಾಟವು ಒಂದು ಮುಖ್ಯವಾದದ್ದು, ಕ್ರಿ.ಶ. 1971ರಲ್ಲಿ ಸ್ಥಾಪಿತವಾದ ಈ ಕೈಗಾರಿಕೆಯು ಖಾಯಂ ನೌಕರರು ಮತ್ತು ಹಂಗಾಮಿ ನೌಕರರನ್ನು ಒಳಗೊಂಡಂತೆ ಸುಮಾರು 750 ಜನ ಕಾರ್ಮಿಕರು ದಿನನಿತ್ಯ ಕೆಲಸ ಮಾಡುತ್ತಿದ್ದರು. ಇದು ಸ್ಥಾಪನೆಯಾದ ನಂತರ ಸುಮಾರು 10 ವರ್ಷಗಳ ಕಾಲ ಇಲ್ಲಿ ಯಾವುದೇ ಕಾರ್ಮಿಕರ ಸಂಘಟನೆಗಳು ಇರಲಿಲ್ಲ. ಕಾರ್ಮಿಕರು ಕನಿಷ್ಠ ಕೂಲಿ/ವೇತನ ಇಲ್ಲದೇ ಕಠಿಣವಾದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರು.ಅಲ್ಲಿನ ಆಡಳಿತ ಮಂಡಳಿಯ ಮುಂದೆ ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಮನವಿ ಸಲ್ಲಿಸಿದರೇ ಅದನ್ನು ತಿರಸ್ಕರಿಸುತ್ತಿದ್ದರು.ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರತಿಭಟನೆಗಳನ್ನು ನಡೆಸಿದರೆ ಅಂತಹ ಹೋರಾಟಗಳನ್ನು ದಮನ ಮಾಡುತ್ತಿದ್ದು, ಅದಕ್ಕೆ ಪೊಲೀಸರ ನೆರವನ್ನು ತೆಗೆದುಕೊಳ್ಳುತ್ತಿದ್ದರು.ಕಾರ್ಮಿಕರಲ್ಲಿ ಕೆಲವರು ಆಡಳಿತ ಮಂಡಳಿಯ ಪರವಾಗಿದ್ದು, ಕಾರ್ಮಿಕರ ಪ್ರತಿಭಟನೆಗಳು ವಿಫಲವಾಗುತ್ತಿದ್ದವು. ಹೀಗಿರುವಾಗ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಮೇಲಿನ ದಬ್ಬಾಳಿಕೆ, ಶೋಷಣೆಗಳನ್ನು ಖಂಡಿಸಿ ಎ.ಐ.ಟಿ.ಯು.ಸಿ.ಸಂಘಟನೆಯು ಮೊದಲ ಬಾರಿಗೆ ಕಾರ್ಮಿಕರನ್ನು ಸಂಘಟಿಸಲು 1980ರಲ್ಲಿ ಮುಂದಾಯಿತು.ಅದರಂತೆ ಕಾರ್ಮಿಕ ನಾಯಕರಾದ ಶ್ರೀ ಪಂಪಾಪತಿ, ಶ್ರೀ ವಿ.ಆರ್.ಆನಂದತೀರ್ಥ, ಶ್ರೀ ಜಿ.ಚಂದ್ರಣ್ಣ ಶ್ರೀ ಸಿ.ವೈ.ಶಿವರುದ್ರಪ್ಪ ಮತ್ತು ಸಕ್ಕರೆ ಕಾರ್ಖಾನೆಯ ಕಾರ್ಮಿಕರಾದ ಶ್ರೀ ಎಸ್.ಸಿ.ಕುಮಾರ್, ಶ್ರೀ ಚೌಡಪೂರ್, ಶ್ರೀ ಬಸಪ್ಪ, ಶ್ರೀ ರಾಮಾಂಜನೇಯ ಮುಂತಾದವರು ಸಕ್ಕರೆ ಕಾರ್ಖಾನೆಯ ಕಾರ್ಮಿಕರನ್ನು ಸಂಘಟಿಸಿದರು.ತದನಂತರ ತಮ್ಮ ಸಮಸ್ಯೆಗಳನ್ನು ಆಡಳಿತ ಮಂಡಳಿಗೆ ತಿಳಿಸಿ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಇವರುಗಳು ವೇತನ ಹೆಚ್ಚಳಕ್ಕಾಗಿ, ಕನಿಷ್ಠ ವೇತನಕ್ಕಾಗಿ, ಬೋನಸ್‌ಗಾಗಿ, ವೈದ್ಯಕೀಯ ಸೌಲಭ್ಯ, ಪಿ.ಎಫ್ ಮುಂತಾದ ಸರ್ಕಾರಿ ಸವಲತ್ತುಗಳನ್ನು ಬಯಸಿ ಹೋರಾಡುತ್ತಿದ್ದರು.ಸಕ್ಕರೆ ಕಾರ್ಮಿಕರು ಅನೇಕ ಬಾರಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಚಿತ್ರದುರ್ಗ ಜಿಲ್ಲಾಧಿಕಾರಿ ಕಛೇರಿಗೆ ಪಾದಯಾತ್ರೆಯ ಮೂಲಕ ತೆರಳಿ ಮನವಿ ಸಲ್ಲಿಸಿ ಬರುತ್ತಿದ್ದರು.ಅದಕ್ಕೆ ಪೂರಕವಾಗಿ ಆಡಳಿತ ಮಂಡಳಿ, ಸರ್ಕಾರಿ ಅಧಿಕಾರಿಗಳ ಮಧ್ಯೆ ಮಾತುಕತೆಗಳಾಗಿ ಕಾರ್ಮಿಕ ಸಮಸ್ಯೆಗಳಿಗೆ ಅಲ್ಪಸ್ವಲ್ಪ ಪರಿಹಾರ ನೀಡಲಾಗುತ್ತಿದ್ದುದನ್ನು ಗಮನಿಸಬಹುದು.1989ರ ವೇಳೆಗೆ ಕಾರ್ಮಿಕರ ಸಂಘಟನೆಗಳು ಬಲಗೊಂಡಂತೆ ಕಾರ್ಮಿಕರಿಗೆ ಕನಿಷ್ಠ ವೇತನ, ಬೋನಸ್‌ಗಳು, ಮೂಲಭೂತ ಸೌಕರ್ಯಗಳನ್ನು ಪೂರೈಸಿಕೊಳ್ಳಲು ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಎಐಟಿಯುಸಿ ನೇತೃತ್ವದಲ್ಲಿ ಶ್ರೀ ಪಂಪಾಪತಿ ನೇತೃತ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಕಾರ್ಮಿಕ ಮುಖಂಡರಾದ ಜಿ.ಚಂದ್ರಣ್ಣ ಸಕ್ಕರೆ ಕಾರ್ಖಾನೆಯ ನೌಕರರಾದ ಶ್ರೀ ಎಸ್.ಸಿ.ಕುಮಾರ್, ಶ್ರೀ ಚೌಡಪೂರ್, ಶ್ರೀ ಬಸಪ್ಪ, ಶ್ರೀ ರಾಮಾಂಜನೇಯ ಮುಂತಾದವರು ಹಿರಿಯೂರಿನ ಮುನ್ಸಿಪಲ್ ಕಛೇರಿಯ ಮುಂದೆ ಅಮರಣಾಂತ

ಉಪವಾಸ ಸತ್ಯಾಗ್ರಹವನ್ನು ನಡೆಸಲಾಯಿತು. ಆಗ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಅಧ್ಯಕ್ಷರಾದ ಬಿ.ಎಲ್.ಗೌಡರವರು ಅವರ ಬೇಡಿಕೆಗಳನ್ನು ಈಡೇರಿಸಲು ಒಪ್ಪಿದಾಗ ಪ್ರತಿಭಟನೆಯನ್ನು ನಿಲ್ಲಿಸಿದರು. ಹೀಗೆ ಶೋಷಿತ ಕಾರ್ಮಿಕರು ಸಂಘಟಿತರಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸೂಕ್ತ ನಾಯಕತ್ವ ಮತ್ತು ಸಂಘಟನಾ ಇಚ್ಛಾಶಕ್ತಿಗಳು ಜೊತೆಯಾದರೆ ಎಂತಹ ಅಡ್ಡಿ ಆತಂಕಗಳನ್ನು ಸಮರ್ಥವಾಗಿ ಎದುರಿಸಿ ಮಾಲೀಕರ ದಬ್ಬಾಳಿಕೆ ಶೋಷಣೆಯ ವಿರುದ್ಧ ಪ್ರತಿಭಟನೆ ನಡೆಸಿ ಗೆಲುವು ಸಾಧಿಸಬಹುದೆಂದು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದಂತಹ ಕಾರ್ಮಿಕರ ಸಂಘಟನೆ ಮತ್ತು ನಾಯಕತ್ವದ ಹಿನ್ನಲೆಯಲ್ಲಿ ನಡೆದ ಪ್ರತಿಭಟನೆಗಳು ನಮಗೆ ಉದಾಹರಣೆಯಾಗಿವೆ.

**ವಕ್ತೃ ವಿವರ:**

- ಕಾಂ.ಜಿ.ಸಿ.ಸುರೇಶ್‌ಬಾಬು. ಎ.ಐ.ಟಿ.ಯು.ಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಚಿತ್ರದುರ್ಗ.
- ಕಾಂ.ಸಿ.ವೈ.ಶಿವರುದ್ರಪ್ಪ, ಎ.ಐ.ಟಿ.ಯು.ಸಿ. ರಾಜ್ಯ ಸಂಚಾಲಕರಾದ, ಚಳ್ಳಕೆರೆ.
- ಕುಮಾರ್‌ಎಸ್.ಸಿ. ಅಧ್ಯಕ್ಷರು,ಎ.ಐ.ಟಿ.ಯು.ಸಿ. ಹಿರಿಯೂರು ತಾಲೂಕು.
- ಜಾಫರ್ ಶರೀಫ್. ಅಧ್ಯಕ್ಷರು. ಎ.ಐ.ಟಿ.ಯು.ಸಿ. ಮೊಳಕಾಲ್ಮುರು ತಾಲೂಕು.

**ಪರಾಮರ್ಶನ ಗ್ರಂಥಗಳು:**


- ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ 2011–12. (2013).ಜಿಲ್ಲಾ ಪಂಚಾಯತ್.
- ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ–8. (2017). ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಮಂಜುನಾಥ ನಾಯಕ್. ಕೆ. (2015). ಚಿತ್ರದುರ್ಗ ಜಿಲ್ಲಾ ದರ್ಶನ, ಪಾರ್ವತಿ ಪ್ರಕಾಶನ.
- ಶಿವಪುತ್ರ ಪೋತಾಲ್ಕರ್. (2015). ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಇನ್ ಕರ್ನಾಟಕ. ಲಕ್ಷ್ಮಿ ಬುಕ್ ಪಬ್ಲಿಕೇಷನ್.
- ತಿಪ್ಪೇಸ್ವಾಮಿ ಆರ್. (2019). ಎಣ್ಣೆ ಗಿರಣಿಯ ಕಾರ್ಮಿಕರ ಸಮಸ್ಯೆಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಸಮಾಜಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ.
- ವೇದರಾಜ್ ಎನ್.ಕೆ. (ಸಂ.). (2021).ಭಾರತದ ಕಮ್ಯುನಿಸ್ಟ್ ಆಂದೋಲನ. ಕ್ರಿಯಾ ಪ್ರಕಾಶನ.
- ವೆಂಕಟಸ್ವಾಮಿ ಎಂ. (2010). ಕೋಲಾರದ ಚಿನ್ನದ ಗಣಿಗಳು. ಸಾಹಿತ್ಯ ಸುಗ್ಗಿ ಪ್ರಕಾಶನ.
- ವಿಜಯ್ ಪೂಣಚ್ಚ ತಂಬಂಡ ಮತ್ತು ಚಿನ್ನಸ್ವಾಮಿ ಸೋಸಲೆ (ಸಂ.). (2010). ಸಮಕಾಲೀನ ಕರ್ನಾಟಕ ಚರಿತ್ರೆ ಸಂಪುಟ–6. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪ್ರಜಾವಾಣಿ, ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳ ವರದಿಗಳು.